# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಟಮಕ, ಕೋಲಾರ-563 103

Email: bnuregistrar@karnataka.gov.in | Website: www.bnu.karnataka
ಕಛೇರಿ ದೂರವಾಣಿ: 08152 243152/53


---

ಸಂಖ್ಯೆ: ಬೆಂ.ಉ.ವಿ.ವಿ/ಕು.ಸ.ಕಾ/ಶೈ.ವಿ/ 1889 /2022-23 ದಿನಾಂಕ: 22.10.2022

-:ಪರಿಷ್ಕೃತ ಸುತ್ತೋಲೆ:-

**ವಿಷಯ:** 2022-23 ನೇ ಶೈಕ್ಷಣಿಕ ಸಾಲಿನ ಸ್ನಾತಕ ಪ್ರಥಮ ಸೆಮಿಸ್ಟರ್ ಬಿ.ಎಸ್ಸಿ (B.Sc)ಪದವಿಗೆ ಮಾತ್ರ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** 1. ವಿ.ವಿ. ಸುತ್ತೋಲೆ ಸಂಖ್ಯೆ: ಬೆಂ.ಉ.ವಿ.ವಿ/ಕು.ಸ.ಕಾ/ಶೈ.ವಿ/1285/2022-23, ದಿನಾಂಕ: 19.09.2022

2. ಸರ್ಕಾರದ ಪತ್ರ ಸಂಖ್ಯೆ:ಇಡಿ 217 ಯು.ಎಸ್.ಇ 2022 ಬೆಂಗಳೂರು, ದಿನಾಂಕ: 21.10.2022.

3. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 22.10.2022.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-(01)ರ ವಿಶ್ವವಿದ್ಯಾಲಯದ ಪರಿಷ್ಕೃತ ಸುತ್ತೋಲೆಯಂತೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರಥಮ ಸೆಮಿಸ್ಟರ್ ಸ್ನಾತಕ ವಿವಿಧ ಪದವಿಗಳ ಪ್ರವೇಶಾತಿಗೆ ದಂಡ ಶುಲ್ಕದೊಂದಿಗೆ ಅಂತಿಮ ದಿನಾಂಕವನ್ನು: 21.10.2022 ರವರೆಗೆ ವಿಸ್ತರಿಸಿ ಪರಿಷ್ಕೃತ ಸುತ್ತೋಲೆ ಹೊರಡಿಸಲಾಗಿತ್ತು.

ಮುಂದುವರೆದು, ಉಲ್ಲೇಖ (02)ಸರ್ಕಾರಿ ಆದೇಶದನ್ವಯ ಪ್ರಸ್ತುತ CET Counseling ತಡವಾಗಿರುವುದರಿಂದ Counseling ಪೂರ್ಣಗೊಂಡ ನಂತರ B.Sc ಪದವಿಗೆ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಸಾಧ್ಯತೆ ಇರುವುದರಿಂದ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ 2022-23ನೇ ಶೈಕ್ಷಣಿಕ ಸಾಲಿನ ಸ್ನಾತಕ ಪ್ರಥಮ ಸೆಮಿಸ್ಟರ್ ಬಿ.ಎಸ್ಸಿ (B.Sc) ಪದವಿ ಕೋರ್ಸಿಗೆ ಅನ್ವಯಿಸುವಂತೆ ಮಾತ್ರ ಪ್ರವೇಶಾತಿಗೆ ಕಾಲಾವಕಾಶವನ್ನು ದಿನಾಂಕ: 29.10.2022ರವರೆಗೆ ಮಾತ್ರ ಈ ಕೆಳಕಂಡ ಷರತ್ತಿಗೊಳಪಟ್ಟು ವಿಸ್ತರಿಸಿ ಪರಿಷ್ಕೃತ ಸುತ್ತೋಲೆ ಹೊರಡಿಸಲಾಗಿದೆ.

- ಅಸ್ತಿತ್ವದಲ್ಲಿರುವ ತರಗತಿಗಳು ಮತ್ತು ಕೋರ್ಸುಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.
- ಉನ್ನತ ಶಿಕ್ಷಣ ಇಲಾಖೆ ಹಾಗೂ ವಿಶ್ವವಿದ್ಯಾಲಯವು ಹೊರಡಿಸಿರುವ ಶೈಕ್ಷಣಿಕ ವೇಳಾಪಟ್ಟಿಯನ್ವಯ ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು.
- ಈ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ರಜಾ ಹಾಗೂ ಕರ್ತವ್ಯದ ದಿನಗಳಲ್ಲಿ ವಿಶೇಷ ತರಗತಿಗಳನ್ನು ಹೆಚ್ಚುವರಿಯಾಗಿ ತೆಗೆದುಕೊಂಡು ಶೇ 75 ರಷ್ಟು ಹಾಜರಾತಿಯನ್ನು ಗಳಿಸುವ ಹಾಗೂ ಪಠ್ಯಕ್ರಮಗಳನ್ನು ಪೂರ್ಣಗೊಳಿಸುವ ಷರತ್ತಿಗೊಳಪಟ್ಟು ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮತಿ ನೀಡಲಾಗಿದೆ.

*ವಿ.ಸೂ.: 2022-23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪ್ರವೇಶಾನುಮೋದನೆಯ ಜಿಲ್ಲಾವಾರು ದಿನಾಂಕಗಳನ್ನು ನಂತರದಲ್ಲಿ ಪ್ರಕಟಿಸಲಾಗುವುದು.*

22/10

ಕುಲಸಚಿವರು

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ-ಕರ್ನಾಟಕ-563 103.

Scanned by CamScanner

ಗೆ,
ಪ್ರಾಂಶುಪಾಲರು,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು.

ಪ್ರತಿಗಳು:- ಮಾಹಿತಿಗಾಗಿ

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು-560001
2. ಆಪ್ತ ಶಾಖೆ ಕುಲಪತಿಗಳ ಕಾರ್ಯಾಲಯ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ- 563 103
3. ಕುಲಸಚಿವರ (ಮೌಲ್ಯಮಾಪನ) ಬೆಂಗಳೂರು ಉತ್ತರವಿಶ್ವವಿದ್ಯಾಲಯ, ಟಮಕ, ಕೋಲಾರ- 563 103
4. ಹಣಕಾಸು ಅಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ- 563 103
5. ಸಂಯೋಜಕರು,ಯು.ಯು.ಸಿ.ಎಂ.ಎಸ್ ,ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ- 563 103
6. ಕಛೇರಿ ಪ್ರತಿ.

Scanned by CamScanner

Scanned by CamScanner